# ಮೈಸೂರ ಗಜಿತಿ.

ನಂ. 36 ಸರ್ಕಾರದಿಂದ ಫಾಯಿಷ್ ಆದ್ದು. ಸ್ 1890.

ಬೆಂಗಳೂರು, ಶನಿವಾರ, ಸೆಪ್ಟೆಂಬರ್ ತಾ|| 13, ಸ್ 1890.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

## ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟಿಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟಿಂಡೆಂಟರು, ಫಾರೆಸ್ಟು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಆಫಿಸ್ ನೋಟಿಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಗಳು ವ ರೆಗ್ಯುಲೇಷಗಳು—1890ನೇ ಇಸವಿಯ IIನೇ ನಂಬರ್ ರೆಗ್ಯುಲೇಷ್.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಯಿಲ್ಲಾ.

## 1ನೇ ಭಾಗ.

### ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

### ಜನರಲ್.

### ಇಸ್ತಿಹಾರ್‌ನಾಮೆ.

ತಾರೀಖು 23ನೇ ಆಗಸ್ಟ್ 1890.

ನಂ. 204—1889ನೇ ಇಸವಿ ಅಕ್ಟೋಬರ್ 9ನೇ ಮತ್ತು ಂ 206ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಫಾಯಿಷ್ಮಾಡಲ್ಪಟ್ಟ ಫಾರೆಸ್ಟ್ ಸಬ್ ಸಿಡಿಯರಿ ರೂಲ್ಸ್‌ಗಳ Vನೇ ಪ್ಯಾರಾವಿಗೆ ಶೇರಿದ ಕಡೆ ಕಲಮಿಗೆ ಈ ಕೆಳಗೆ ಬರುವದನ್ನ ಶೇರಿಸಲ್ಪಡತಕ್ಕದ್ದು:–

"ಬಿಕರಿಯಾದ ಮೊಬಲಗಿನ ಬಾಕಿಯನ್ನು ಬಿಕರಿಯಾದ ತಾರೀಖು ಲಾಗಾಯಿತು 3 ತಿಂಗಳವಳಗಾಗಿ ತೆಗದುಕೊಳ್ಳಲ್ಪಡದಿದ್ದರೆ ಸದರೀ ಹಣವು ಫಾರೆಸ್ಟ್ ಇಲಾಖೆಗೋಸ್ಕರ ಜಮೆ ಕಟ್ಟಲ್ಪಡತಕ್ಕದ್ದು."

ತಾರೀಖು 26ನೇ ಆಗಸ್ಟ್ 1890.

ನಂ. 211—ಪರಾಯಿ ದೇಶದ ಸಾರಾಯಿ ಮತ್ತು ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನ ಬಿಕರಿ ಮಾಡುವ ಬಗ್ಯೆ ಕೊಡಲ್ಪಡುವ ಲೈಸೆನ್ಸ್‌ಗಳ ವಿಷಯಕವಾದ 1889ನೇ ಇಸವಿ ಮೇ 9ನೇ ಮತ್ತು ಂ 31ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಫಾಯಿಷ್ ಮಾಡಲ್ಪಟ್ಟ ರೂಲಿನ ಇದರಡಿ ಕಂಡ ತಿದ್ದುಪಡಿಯು, ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳಿವಳಿಕೆ ಬಗ್ಯೆ ಇದರಿಂದ ಪ್ರಕಟಿಸಲ್ಪಟ್ಟಿರುತ್ತೆ:—

ರಿಫ್ರೆಷ್‌ಮೆಂಟ್ ರೂಮು ಅಂಗಡಿಗಳಲ್ಲಿ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನ ಮಾರುವ ಬಗ್ಯೆ ಕೊಡಲ್ಪಡುವ ಲೈಸೆನ್ಸಿನ IIIನೇ ರೂಲಿನ ಆಖ್ಯೆರಿನಲ್ಲಿ, "ಇಂಥಾ 51 ಡ್ರಾಂಗಳು ಬಂದು ಇಂಪೀರಿಯಲ್ ಗ್ಯಾಲನ್ನಿಗೆ ಸಮಾನಾಗಿರುವದು" ಯಂಬ ಮಾತುಗಳು ಶೇರಿಸಲ್ಪಡತಕ್ಕದ್ದು.

ತಾರೀಖು 15ನೇ ಆಗಸ್ಟ್ 1890.

ನಂ. 122.—1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಯಮವನ್ನನುಸರಿಸಿ ಈ ಕೆಳಗೆ ಕಂಡ ಪೆಷ್ಯೂಲಿನಲ್ಲಿ ವಿವರಿಸಿರುವ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಬೆಂಗಳೂರು ಪಟ್ಟಣಕ್ಕೆ ಸೇರಿದ ಜಕ್ಕರಾಯನಕೆರೆ ಹತ್ತರದಲ್ಲಿನ ನೂತನವಾದ ಸ್ಮಶಾನಕ್ಕೊಸ್ಕರ ಬೇಕಾಗಿರುತ್ತದೆಂದು ಇದರಿಂದ ಪ್ರಕಟಿಸಲ್ಪಡುತ್ತೆ.

| ತಾಲ್ಲೂಕು ಮತ್ತು ಗ್ರಾಮ. | ಮೂಲೀಕನ ಹೆಸರು. | ಸರ್ವೆ ನಂಬರ್. | ವಿಸ್ತೀರ್ಣ. ಎಕರೆ. | ವಿಸ್ತೀರ್ಣ. ಗುಂಟೆ. | ಜಮೀನಿನ ವಿವರ. | ಕಂದಾಯ. | | | ಷರಾ. |
|---|---|---|---|---|---|---|---|---|---|
| ಬೆಂಗಳೂರು ತಾಲ್ಲೂಕಿಗೆ ಸೇರಿದ ಹನುಮಂತಾಪುರ. | ಗುಂಡಪ್ಪ | 46 | 5 | 23 | ಖುಷ್ಕಿ | 6 | 8 | 0 | ಜಕ್ಕುಬಂದಿ. |
| | | ಡಿಟೋ | 2 | 14 | ಬಾಗಾಯತು | 21 | 8 | 0 | ಪೂರ್ವಕ್ಕೆ—ಕೇತಮಾರನಹಳ್ಳಿ ದಕ್ಷಿಣಕ್ಕೆ—ಗುಂಡಪ್ಪನವರಿಗೆ ಸೇರಿದ 45ನೇ ಸರ್ವೇ ನಂಬರು ಪೂರ್ವಕ್ಕೆ—ಹನುಮಂತಾಪುರ ಗ್ರಾಮಕ್ಕೆ ಸೇರಿದ 43ನೇ ಸರ್ವೇ ನಂಬರು ಮತ್ತು ಕೇತಮಾರನಹಳ್ಳಿ |
| | ಜುಮ್ಲಾ.... | .. | 7 | 37 | | 28 | 0 | 0 | ಪಶ್ಚಿಮಕ್ಕೆ—ಕೇತಮಾರನಹಳ್ಳಿ |

ತಾರೀಖು 15ನೇ ಆಗಸ್ಟ್ 1890.

ನಂ. 127.—1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಯಮವನ್ನನುಸರಿಸಿ ಇದರಿಂದ ಪ್ರಕಟಿಸಲ್ಪಡುವದೇನಂದರೆ—ಮೈಸೂರು ಕಿಲ್ಲೆಯಲ್ಲಿ ತ್ರಿನೇಶ್ವರ ದೇವಸ್ಥಾನದ ಹಿಂದುಗಡೆಯಲ್ಲಿರುವ ಈ ಕೆಳಗೆ ನಮೂದು ಮಾಡಲ್ಪಟ್ಟ ಮನೆಯು ಸರ್ಕಾರ್ ಕೆಲಸಗಳಿಗೋಸ್ಕರ ಬೇಕಾಗಿರುತ್ತೆ:—

| ನಂಬರ್. | ಮೂಲೀಕನ ಹೆಸರು. | ವಿವರಣೆ. | ವಿಸ್ತೀರ್ಣ. ಪೂರ್ವ ಪಶ್ಚಿಮ. | ವಿಸ್ತೀರ್ಣ. ಉತ್ತರ ದಕ್ಷಿಣ. | ಅಂಕಣಗಳು. | ಚಕ್ಕುಬಂದಿ. |
|---|---|---|---|---|---|---|
| 1 | ಪ್ಲೀಡರ್ ತಮ್ಮಯ್ಯ .. | ಗಚ್ಚಿನಮನೆ .. | ಅಡಿ 0 | ಅಡಿ 0 | 3 | ಪೂರ್ವಕ್ಕೆ—ರೋಡ್ ಪಶ್ಚಿಮಕ್ಕೆ—ಶೃಂಗಾರ ತೋಟ ಉತ್ತರಕ್ಕೆ—ರೋಡ್ ದಕ್ಷಿಣಕ್ಕೆ—ಡಿಟೋ |
| | | ತಕ್ತಪೋಷ್ .. | 0 | 0 | 24 | |
| | | ಜುಮ್ಲಾ ನಿವೇಶನ .. | 26 | 47 | | |

ತಾರೀಖು 29ನೇ ಆಗಸ್ಟ್ 1890.

ನಂ. 217.—1890ನೇ ಇಸವಿ ಮೇ 23ನೇ ಮಕ್ಕಂ A ನಂಬರ್ ಇಸ್ತಿಹಾರ್ ನಾಮೆಯ VIIIನೇ ಷರತ್ತಿನ ನಿಯಮಗಳನ್ನನುಸರಿಸಿ ಭಂಗಾರದ ಗನೀಕೆಲಸ ಗುತ್ತಿಗೆ ಬಗ್ಗೆ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರರ ಹೆಸರು, ಮತ್ತು ಯಾವ ಬ್ಲಾಕ್ ಯಾನೆ ತಾಕುಗಳಿಗೋಸ್ಕರ ಸದರಿಯವರ ದರಖಾಸ್ತುಗಳು ಮಂಜೂರ್ಮಾಡಲ್ಪಟ್ಟಿವೆಯೊ ಅವುಗಳ ಹೆಸರು ಸಹ ತೋರಿಸುವ ಈ ಕೆಳಗೆ ಕಂಡ ಪಟ್ಟಿಯು ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತೆ.

| ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರರ ಹೆಸರು. | ತಾಕಿನ ವಿವರಣೆ. |
|---|---|
| ಮೆಸ್ಸರ್ ಹೆರ್ಬರ್ಟ್, ಫಾಲ್ಕನರ್, ಮೆಸ್ಸರ್ ಆರ್ಥರ್ ಫ್ರೆಡರಿಕ್ ಸ್ಲೆಫರ್ಡ್ ದೇಬಿಲ್ ಸ್ಪ್ರಿಕ್ಲಂಡ್. | ಹಾಸನ ಡಿಸ್ಟ್ರಿಕ್ಟ್ ಚನ್ನರಾಯಪಟ್ಟ್ಣ ತಾಲ್ಲೂಕಿನಲ್ಲಿರುವ D ಗುರ್ತುಳ್ಳ ಕೆಂಪಿಕೋಟೆ ತಾಕುಗಳು. |
| ಮೆಸ್ಸರ್ ಚಾರ್ಲ್ಸ್ ಹೆರ್ಬರ್ಟ್ ಬ್ಯಾರ್ಕ್, ಮೆಸ್ಸರ್ ರಾಬರ್ಟ್ ಗಾರ್ಡನ್ ಚೇಸ್ ಮೆಸ್ಸರ್ ನಿಸ್‌ಫೀಲ್ಡ್ ಗ್ರ್ಯಾಂಟ್-ಬರ್ನರ್ಸ ಮತ್ತು ಮೆಸ್ಸರ್ ಸಾಹುಕಾರ್ ಬರಮಂಣ | |
| ಮೈಸೂರು ವೆಸ್ಟ್ ಗೋಲ್ ಕಂಪೆನಿ ಲಿಮಿಟೆಡ್ ಮತ್ತು ಮೈಸೂರು ಮೈನಾಡ್ ಕರ್ನಾಲಿ ಚೇಟೆಡ್ ಗೋಲ್ಡ್ ಮೈನಿಂಗ್ ಕಂಪನಿ ಲಿಮಿಟೆಡ್ | ಕೋಲಾರ ಡಿಸ್ಟ್ರಿಕ್ಟ್ ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿರುವ ಕೆರೆತಾಕ್ |

ತಾರೀಖು 25ನೇ ಆಗಸ್ಟ್ 1890.

ನಂ. 208.—1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷರ್ಸ ಆಕ್ಟಿನ 6ನೇ ಸೆಕ್ಷರ್ಸ ನಿಯಮಗಳನ್ನನುಸರಿಸಿ ಇದರಿಂದ ಪ್ರಕಟಿಸಲ್ಪಡುವದೇನಂದರೆ ಈ ಕೆಳಗೆ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿನ ಖೈದಿಗಳ ಸ್ಮಶಾನಕ್ಕೋಸ್ಕರ ಬೇಕಾಗಿರುತ್ತೆ:—

| ನಂಬರ್. | ತಾಲ್ಲೂಕು. | ಹೋಬಳಿ. | ಗ್ರಾಮ. | ಸರ್ವೆ ನಂಬರು. | ವಿಸ್ತೀರ್ಣ. ಎಕರೆ. | ವಿಸ್ತೀರ್ಣ. ಗುಂಟೆ. | ಜಮೀನ್ ವಿವರ. | ಕಂದಾಯ. | | | |
|---|---|---|---|---|---|---|---|---|---|---|---|
| | | | | | | | | | | | ಚಕ್ಕುಬಂದಿ. |
| | ಬೆಂಗಳೂರು. | ಯಶವಂತಪುರ. | ಕೆಂಪಾಪುರನಹಳ್ಳಿ. | 47ನೇ ನಂಬರ್ ಪೈಕಿ. | 8 | 0 | 4 ಜನರಗಳು ಅರುಣ ಮಿಷ್ಕಿಲ್ ಜಮೀನ್. | 6 | 0 | 0 | ಪೂರ್ವಕ್ಕೆ ರೈಲ್ವೇ ಜಮೀನ್ ಮತ್ತು ಚಿಕ್ಕ ಪಾಪಂಣನಿಗೆ ಕೇರಿದ 48ನೇ ಸರ್ವೆ ನಂಬರು. |
| | | | | | | | | | | | ಪಶ್ಚಿಮಕ್ಕೆ 46ನೇ ಸರ್ವೆ ನಂಬರು. |
| | | | | | | | | | | | ಉತ್ತರಕ್ಕೆ 46ನೇ ಸರ್ವೆ ನಂಬರು ಮತ್ತು ಮೊಡ್ಡಿಗಿರಿಗೆ ಕೇರಿದ 47ನೇ ನಂಬರು. |
| | | | | | | | | | | | ದಕ್ಷಿಣಕ್ಕೆ ರಡ್ಡಿ ಕರಿಯನಿಗೆ ಕೇರಿದ 49ನೇ ಸರ್ವೆ ನಂಬರು. |

ತಾರೀಖು 3ನೇ ಸೆಪ್ಟೆಂಬರ್ 1890.

ನಂ. 219.—ಹುಣಸೂರು ತಾಲ್ಲೂಕು ಅಮಲ್ದಾರ್ ಮಿಸ್ಕಿಕಮಾಲುದ್ದೀನ್ ಅಲ್ಲಿಬಾರ್ದಿಗೆ, 1890ನೇ ಇಸವಿ ಜುಲೈ 18ನೇ ಮತ್ತು 149ನೇ ನಂಬರ್ ಇನ್ಸ್ಟ್ರುಮೆಂಟಿನಿಂದ ಕೊಡಲ್ಪಟ್ಟ 20 ದಿವಸಗಳ ಪ್ರಿವಿಲೀಜ್ ರಜಾವನ್ನು 1890ನೇ ಇಸವಿ ಸೆಪ್ಟೆಂಬರ್ 2ನೇ ಮತ್ತು ಲಾಗಾಯ್ತು ಉಪಯೋಗಿಸಿಕೊಳ್ಳುವದಕ್ಕೆ ಅಪ್ಪಣೆ ಕೊಡಲ್ಪಟ್ಟಿರುತ್ತೆ.

---

ತಾರೀಖು 15ನೇ ಆಗಸ್ಟ್ 1890ನೇ ಇಸವಿ.

ನಂ. 196.—1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷರ್ಸ ಆಕ್ಟಿನ 6ನೇ ಸೆಕ್ಷರ್ಸ ನಿಯಮವನ್ನನುಸರಿಸಿ ಮೈಸೂರು ಷಹರಿನ ಹೊಸ ವಾರ್ಕೆಟ್ ಹಿಂಬಗಡೆ ಯಿರುವ ಈ ಕೆಳಗೆ ನಮೂದು ಮಾಡಲ್ಪಟ್ಟ ಮನೆಗಳು ಸರ್ಕಾರ ಕೆಲಸಕ್ಕೋಸ್ಕರ ಬೇಕಾಗಿರುತ್ತವೆಯೆಂದು ಇದರಿಂದ ಪ್ರಕಟಿಸಲ್ಪಡುತ್ತೆ:—

| ಜನರಲ್ ನಂಬರ್. | ಸ್ಪೆಷಲ್ ನಂಬರ್. | ಖಾಯಂ ನಂಬರ್. | ಮಾಲೀಕರ ಹೆಸರುಗಳು. | ವಿವರಣೆ. | ವಿಸ್ತೀರ್ಣ. ಪಶ್ಚಿಮ ಪೂರ್ವ ಗಜ. | ದಕ್ಷಿಣ ಉತ್ತರ ಗಜ. | ಲೆಕ್ಕಣಿಗಳು. | ಚಕ್ಕು ಬಂದಿಗಳು. |
|---|---|---|---|---|---|---|---|---|
| 1 | 5 | 33 | ಮುರುಗಮ್ಮ | ಹುಲ್ಲುಮನೆ | 18 | 15 | 2 | ಪೂರ್ವ ಪಶ್ಚಿಮ ಮತ್ತು ದಕ್ಷಿಣಕ್ಕೆ ಖಾಲಿ ನಿವೇಶನ |
| | | | | ಡಿಟೋ ಪಡಸಾಲೆ ಜಮ್ಮಿ | 0 | 0 | ½ | ಉತ್ತರಕ್ಕೆ ಮಾರ್ಕೆಟ್ |
| 2 | 6 | 33 | ಡಿಟೋ | ಹುಲ್ಲುಮನೆ | 11 | 10 | 1½ | ಡಿಟೋ ಡಿಟೋ |
| 3 | 30 | 29 | ಹುಸೇಕ್‌ಖಾ | ಡಿಟೋ | 15 | 17 | 2½ | ಪೂರ್ವಕ್ಕೆ ಓಣಿ, ಪಶ್ಚಿಮಕ್ಕೆ ಮಹಮ್ಮದ್ ಉಸ್ಮಾನನ ಮನೆ, ದಕ್ಷಿಣಕ್ಕೆ ಕಮಾಲ್ ಸಾಬನ ಮನೆ, ಉತ್ತರಕ್ಕೆ ಖಾಲಿ ನಿವೇಶನ |
| 4 | 33 | 10 | ಷೇಕ್ ದಾವೂದ್ | ಹೆಂಚಿನಮನೆ | 48 | 35 | 5 | ಪೂರ್ವಕ್ಕೆ ಹಯಾತ್‌ಖಾನನ ಮನೆ, ಪಶ್ಚಿಮಕ್ಕೆ ಮೊಹದ್ದೀಖಾನನ ಮನೆ, ದಕ್ಷಿಣಕ್ಕೆ ಬಡೆಮಿಯರನ ಮನೆ, ಉತ್ತರಕ್ಕೆ ಖಾಲಿ ನಿವೇಶನ |
| | | | | ಡಿಟೋ ಪಡಸಾಲೆ | 0 | 0 | 3 | |
| | | | | ಹುಲ್ಲುಮನೆ | 0 | 0 | 2 | |
| | | | | ಡಿಟೋ ಡಿಟೋ ಜಮ್ಮಿ | 0 | 0 | 2½ | |
| 5 | 35 | 9 | ಹಯಾತ್‌ಖಾ | ಹೆಂಚಿನಮನೆ ಜಮ್ಮಿ | 9 | 12½ | 2 | ಪೂರ್ವಕ್ಕೆ ಖಾಲಿ ನಿವೇಶನ, ಉತ್ತರಕ್ಕೆ ದಾವೂದ್‌ಸಾಬನ ಮನೆ, ಪಶ್ಚಿಮಕ್ಕೆ ಖಾಲಿ ನಿವೇಶನ, ದಕ್ಷಿಣಕ್ಕೆ ಡಿಟೋ |
| 6 | 46 | 53 | ವೆಂಕಟಾಚಲಂ | ಹೆಂಚಿನ ಪಡಸಾಲೆ | 20 | 22 | 1 | ಪೂರ್ವಕ್ಕೆ ಹಯಾತ್‌ಸಾಬನ ಮನೆ, ಪಶ್ಚಿಮಕ್ಕೆ ಹೈರೋಡು, ದಕ್ಷಿಣಕ್ಕೆ ಲಾಲಾಮೀಯನ ಮನೆ, ಉತ್ತರಕ್ಕೆ ಹುಸೇಕ್‌ಸಾಬನಮನೆ |
| | | | | ಗೋಡೆ ಜಮ್ಮಿ | 0 | 0 | 9 ಗಜ | |
| 7 | 69 | 10 | ಬಡೆಮಿಯ್ಯ | ಹೆಂಚಿನ ಮನೆ | 30 | 36 | 7 | ಪೂರ್ವ ಪಶ್ಚಿಮ ಮತ್ತು ದಕ್ಷಿಣಕ್ಕೆ ಖಾಲಿ ನಿವೇಶನ, ಉತ್ತರಕ್ಕೆ ಖಾಲಿ ನಿವೇಶನ, ಮತ್ತು ಹುಸೇಕ್‌ಸಾಬನ ಮನೆ |
| | | | | ಡಿಟೋ ಪಡಸಾಲೆ ಜಮ್ಮಿ | 0 | 0 | 3 | |
| | | | | ಗೋಡೆ | 19 | 25 | 0 | |
| | | | | | 0 | 0 | 15ಗಜ | |
| 8 | 77 | 22 | ರಾಜಮ್ಮನವಮಗ ಇ ಮಾಂಸಾಬ್ | ಹುಲ್ಲುಮನೆ | 25 | 20 | 3 | ಪೂರ್ವಕ್ಕೆ ಓಣಿ, ಪಶ್ಚಿಮಕ್ಕೆ ಹೈರೋಡು, ದಕ್ಷಿಣಕ್ಕೆ ಖಾಲಿ ನಿವೇಶನ, ಉತ್ತರಕ್ಕೆ ಲಾಲಾಮಿಯ್ಯನ ಮನೆ. |
| | | | | ಗೋಡೆ ಜಮ್ಮಿ | 0 | 0 | 7 ಗಜ | |
| 9 | 94 | 24 25 | ಲಾಲಾಮಿಯ್ಯನ ಅಂಗಡಿ | ಹೆಂಚಿನಮನೆ | 15 | 22 | 3 | ಪೂರ್ವಕ್ಕೆ ಓಣಿ, ಪಶ್ಚಿಮಕ್ಕೆ ಹೈರೋಡು, ದಕ್ಷಿಣಕ್ಕೆ ಇಮಾಂಸಾಬನ ಮನೆ, ಉತ್ತರಕ್ಕೆ ಖಾಲಿ ನಿವೇಶನ |
| | | | | ಡಿಟೊ ಪಡಸಾಲೆ ಜಮ್ಮಿ | 0 | 0 | 1 | |
| 10 | 100 | 48 | ಅಮ್ಮಣ್ಣಿ | ಹೆಂಚಿನಮನೆ | 36 | 24 | 5 | ಪೂರ್ವಕ್ಕೆ ಖಾಲಿ ನಿವೇಶನ, ಪಶ್ಚಿಮಕ್ಕೆ ಹೈರೋಡು, ದಕ್ಷಿಣಕ್ಕೆ ಓಣಿ, ಉತ್ತರಕ್ಕೆ ಮಾದೂಜೀಯನ ಮನೆ |
| | | | | ಡಿಟೋ ಪಡಸಾಲೆ | 0 | 0 | 6 | |
| | | | | ಗೋಡೆ ಜಮ್ಮಿ | 0 | 0 | 4 ಗಜ | |
| 11 | 106 | 43 | ಕಪ್ಪಯ್ಯ | ಹೆಂಚಿನ ಮನೆ | 22 | 27 | 14½ | ಪೂರ್ವಕ್ಕೆ ಬಾಳೇಗೌಡನ ಮನೆ, ಪಶ್ಚಿಮಕ್ಕೆ ಹೈರೋಡು, ದಕ್ಷಿಣಕ್ಕೆ ಓಣಿ, ಉತ್ತರಕ್ಕೆ ಪಡಖಾನೆ |
| | | | | ಡಿಟೋ ಪಡಸಾಲೆ | 0 | 0 | 3 | |
| | | | | ತಖ್ತ್‌ಪೋಷ್ | 0 | 0 | 3½ | |
| | | | | ಗೋಡೆ | 0 | 0 | 25ಗಜ | |
| 12 | 31 | 7 | ಮೊಹದ್ದೀಖಾ | ಹೆಂಚಿನ ಮನೆ | 21 | 32 | 3 | ಪೂರ್ವಕ್ಕೆ ಹುಸೇಕ್‌ಸಾಬನ ಮನೆ, ಪಶ್ಚಿಮಕ್ಕೆ ಮಹಮ್ಮದ್ ಹುಸೇಕ್‌ಸಾಬನ ಮನೆ, ದಕ್ಷಿಣಕ್ಕೆ ಓಣಿ, ಉತ್ತರಕ್ಕೆ ಖಾಲಿ ನಿವೇಶನ |
| | | | | ಡಿಟೋ ಪಡಸಾಲೆ | 0 | 0 | 1 | |
| | | | | ಜಮ್ಮಿ | 11 | 10 | 0 | |
| | | | | | ಮತ್ತು 13 | 7 | 0 | |
| | | | | ಹೆಂಚಿನ ಮನೆ | 27 | 14 | 3 | |
| | | | | ಗೋಡೆ | 0 | 0 | 9 ಲಾಂಬಿ ಗಜ | |
| 13 | 44 | 3 | ಮಹಮ್ಮದ್ ಹುಸೇ | ಹೆಂಚಿನ ಮನೆ | 15 | 62 | 5 | ಪೂರ್ವಕ್ಕೆ ಖಾಲಿ ನಿವೇಶನ, ಪಶ್ಚಿಮಕ್ಕೆ ಹೈರೋಡು, ದಕ್ಷಿಣಕ್ಕೆ ಖಾಲಿ ನಿವೇಶನ, ಉತ್ತರಕ್ಕೆ ಕಮಾಲ್‌ಸಾಬನ ಮನೆ |
| | | | | ಡಿಟೋ ಪಡಸಾಲೆ | 0 | 0 | 2 | |
| | | | | ಗೋಡೆ (ಗಚ್ಚೀಮನೆ) | 0 | 0 | 14 ಗಜಗಳು | |

628



ನಂ. 220.—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ ಕೋಲಾರ ಮುನಿಸಿಫ್ ತಿಮ್ಮಕೃಷ್ಣರಾವ್ ಬಿ. ಯೆ., ಬಿ. ಯಲ್, ಯವರಿಗೆ, 1891ನೇ ಇಸವಿ ಜನವರಿ ತಿಂಗಳು ವರಿವಿಗೆ 3ನೇ ಕ್ಲಾಸ್ ಮಾಜಿಸ್ಟ್ರೇಟರ ಅಧಿಕಾರಗಳು ಕೊಡಲ್ಪಟ್ಟಿರುತ್ತೆ.

ನಂ. 221.—ಕೋಲಾರ ಡಿಸ್ಟ್ರಿಕ್ಟು ಬವರಿಂಗ್‌ಪೇಟೆ ತಾಲ್ಲೂಕು ಚಾರ್ಜಿನಲ್ಲಿರುವ ಡೆಪ್ಯುಟಿ ಅಮಲ್ದಾರ್ ವಿ. ಯರ್. ಗೋಪಾಲ ರಾಯರಿಗೆ, 1890ನೇ ಇಸವಿ ಜುಲೈ 8ನೇ ಮುಕ್ತುಂ 117ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ 1 ತಿಂಗಳ ಪ್ರಿವಿಲೀಜ್ ರಜಾ ಇನ್ನೂ 5 ದಿವಸಗಳ ಪರಿಯಂತ ಹೆಚ್ಚಿಸಲ್ಪಟ್ಟಿರುತ್ತೆ.

ನಂ. 222.—ಬೆಂಗಳೂರು ಡಿಸ್ಟ್ರಿಕ್ಟು ಟ್ರೆಜರಿ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಯೆಸ್. ವೈದ್ಯನಾಥಯ್ಯರವರಿಗೆ, ಮಾಹೇ ವಜಕೂರ್ 3ನೇ ಮುಕ್ತುಂ ಆಗಾಯತು 18 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಬೆಂಗಳೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಅಣ್ಣಾಜಿರಾಯರು, ಮೆಸ್ಟರ್ ವೈದ್ಯನಾಥಯ್ಯರವರು ರಜಾದ ಮೇಲೆ ಯಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಡಿಸ್ಟ್ರಿಕ್ಟು ಟ್ರೆಜರಿ ಚಾರ್ಜನ್ನು ವಹಿಸಿರತಕ್ಕದ್ದು.

ನಂ. 223.—1888ನೇ ಇಸವಿ ಮೇ 25ನೇ ಮುಕ್ತುಂ 461ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಫಾಯಿಷ್ ಮಾಡಲ್ಪಟ್ಟ XIIನೇ ನಂಬರ್ ರೂಲಿಗೆ ಈ ಕೆಳಗೆ ನಮೂದು ಮಾಡಲ್ಪಟ್ಟ ನಿಯಮವು ಕೇದಿಸಲ್ಪಡತಕ್ಕದ್ದು.

ಪರಂತು ಈ XIIನೇ ರೂಲ್ ಅನುಸರಿಸಿ ಡೆಪ್ಯುಟಿ ಕಮ್ಮಿಷನರ್‌ಗಳಿಂದ ಯಾವದಾದರೂ ಬಂದು ಯೆಸ್ಟೇಟಗೋಸ್ಕರ ಕೊಡಲ್ಪಡಬೇಕಾದ ಜಮೀನಿನ ವಿಸ್ತೀರ್ಣವು ಗವರ್ನಮೆಂಟಿನ ಮಂಜೂರಾತಿಯನ್ನೂ ಮುಂದಾಗಿ ಪಡೆದ ಹೊರ್ತು, ಯಾವ ಸಂದರ್ಭದಲ್ಲಿ ಯೂ 10 ಯಿಕರೆಗಳಿಗೆ ಜಾಸ್ತಿಯಾಗಿ ಯಿರತಕ್ಕದ್ದಲ್ಲವು.

---

ತಾರೀಖು 4ನೇ ಸೆಪ್ಟಂಬರ್ 1890.

ನಂ. 218.— ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಮೆಸ್ಟರ್ ಅಬ್ಬುಲ್ ರಹಿಮ್ಮಾರವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಆಗಾಯತು 3 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 224.—ಚನ್ನಪಟ್ಟಣದ ಡೆಪ್ಯುಟಿ ಅಮಲ್ದಾರ್ ಬಾದಾಮಿ ಕೃಷ್ಣರಾಯರು ಅಮಲ್ದಾರ್ ಕುಪ್ಪುಸಾಮಿ ನಾಯಿಡರ ಗೈರ್ ಹಾಜರಿಯಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ದೊಡ್ಡಬಳ್ಳಾಪುರ ತಾಲ್ಲೂಕು 5ನೇ ಕ್ಲಾಸ್ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ನಿಯಮಿಸಲ್ಪಟ್ಟಿರುತ್ತಾರೆ.

ಚೀಫ್ ಕೋರ್ಟ್ ಟ್ರಾನ್ಸ್ಲೇಟರ್ ಡಿ. ನರಸಿಂಗರಾಯರು, ಬಿ. ಕೃಷ್ಣರಾಯರ ಗೈರ್ ಹಾಜರಿಯಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಚನ್ನಪಟ್ಟಣದ ಡೆಪ್ಯುಟಿ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ನಿಯಮಿಸಲ್ಪಟ್ಟಿರುತ್ತಾರೆ.

ನಂ. 225.—ಅರೇಕೆರೆ ತಾಲ್ಲೂಕು ಅಮಲ್ದಾರ್ ವ 2ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಆಹಮದಲ್ಲಿಯವರು, ಇತರ ಕೆಲಸದ ಮೇಲಿರುವ ಮೆಸ್ಟರ್ ಚಿಂಗಯ್ಯಂಕಿಟ್ಟರವರಿಗೆ ಬದಲಾಗಿ ಮೈಸೂರು ತಾಲ್ಲೂಕಿಗೆ ಹಂಗಾಮಿತರೀಕ್ ವರ್ಗ ಮಾಡಲ್ಪಟ್ಟಿರುತ್ತಾರೆ.

ಆಹಮದಲ್ಲಿ ಯಿವರು ಗೈರ್ ಹಾಜರಿಯಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ, ಶ್ರೀರಂಗಪಟ್ಟಣದ ಡೆಪ್ಯುಟಿ ಅಮಲ್ದಾರ್ ಆರ್ ಮಾಧವರಾಯರು ಅರೇಕೆರೆ ತಾಲ್ಲೂಕು 5ನೇ ಕ್ಲಾಸ್ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ನಿಯಮಿಸಲ್ಪಟ್ಟಿರುತ್ತಾರೆ.

ಮೈಸೂರು ಡಿಸ್ಟ್ರಿಕ್ಟು ಪ್ರೊಬೇಷನರ್ ಕೃಷ್ಣೇ ಅರಸಿನವರು ಮಾಧವರಾಯರು ಯಿತರ ಕೆಲಸದ ಮೇಲೆ ಯಿರುವ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಶ್ರೀರಂಗಪಟ್ಟಣದ ಡೆಪ್ಯುಟಿ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ನಿಯಮಿಸಲ್ಪಟ್ಟಿರುತ್ತಾರೆ.

---

ತಾರೀಖು 6ನೇ ಸೆಪ್ಟಂಬರ್ 1890.

ನಂ. 226.—1890ನೇ ಇಸವಿ IIನೇ ನಂಬರ್ ರೆಗ್ಯುಲೇಷನ್ನಿಂದ ತಿದ್ದುಪಡಿಯಾದ 1884ನೇ ಇಸವಿಯ ಮೈಸೂರು ಚೀಫ್ ಕೋರ್ಟ್ ರೆಗ್ಯುಲೇಷನಿನ 12ನೇ ಸೆಕ್ಷನ್ ಅನುಸರಿಸಿ, ಮೈಸೂರು ಸರ್ಕಾರದವರು ಅಪ್ಪಣೆ ಕೊಡಿಸುವದೇನಂದರೆ, 1890ನೇ ಇಸವಿ ಜುಲೈ 12ನೇ ಮುಕ್ತುಮಿನ 10ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಬೆಂಗಳೂರು, ಕೋಲಾರ ಮತ್ತು ತುಮಕೂರು ಈ ಬಾಬತು ರೆವಿನ್ಯೂ ಡಿಸ್ಟ್ರಿಕ್ಟುಗಳ ಸ್ಥಳ ಸರಹದ್ದುಗಳಲ್ಲಿ ಚೀಫ್ ಕೋರ್ಟಿಗೆ ಉಂಟಾಟ್ಟು ಮಾಡಲ್ಪಟ್ಟ ಬಂದು ಡಿಸ್ಟ್ರಿಕ್ಟು ಕೋರ್ಟಿನ ಸಾಧಾರಣವಾದ ಒರಿಜನಲ್ ಸಿವಿಲ್ ಅಧಿಕಾರಗಳೂ, ಸೆಷನ್ ಕೋರ್ಟಿನ ಸಾಧಾರಣವಾದ ಒರಿಜನಲ್ ಕ್ರಿಮಿನಲ್ ಅಧಿಕಾರಗಳೂ ಸುದಾ, 1890ನೇ ಇಸವಿ ಸೆಪ್ಟಂಬರ್ 15ನೇ ಮುಕ್ತುಮಿನಾರಭ್ಯ ವಾಪಸ್ ತೆಗದುಕೊಳ್ಳಲ್ಪಡತಕ್ಕದ್ದಲ್ಲವೆ ಅವುಗಳು ಇದರ ದೆಶೆಯಿಂದ ವಾಪಸ್ ತೆಗದುಕೊಳ್ಳಲ್ಪಟ್ಟಿರುತ್ತೆ. ಸದರೀ ತಾರೀಖು ವ ಆತರುವಾಯ, 1883ನೇ ಇಸವಿಯ ಮೈಸೂರು ಸಿವಿಲ್ ಕೋರ್ಟು ರೆಗ್ಯುಲೇಷನಿನ ನಿಯಮಗಳನ್ನು ಸರಿಸಿ, ಬೆಂಗಳೂರಿನೊಳಗೆ ನಂದೀದುರ್ಗ ಡಿವೀಜ್ಞ್ ಡಿಸ್ಟ್ರಿಕ್ಟು ಕೋರ್ಟು ಯೆಂಬ ಹೆಸರುನಿಂದ ಬಂದು ಡಿಸ್ಟ್ರಿಕ್ಟು ಕೋರ್ಟು ಸ್ಥಾಪಿಸ

ಲ್ಪಡತಕ್ಕದ್ದು, ಸದರೀ ಕೋರ್ಟಿನ ಅಧಿಕಾರದ ಸ್ಥಳ ಸರಹದ್ದಿನೊಳಗೆ ಸದರೀ ರೆವಿನ್ಯೂ ಡಿಸ್ಟ್ರಿಕ್ಟುಗಳಾದ ಬೆಂಗಳೂರು, ಕೋಲಾರ ವ ತುಮಕೂರು ಡಿಸ್ಟ್ರಿಕ್ಟುಗಳು ಅಡಗಿ ಯಿರತಕ್ಕವು. ಸದರೀ ಮೂರು ಡಿಸ್ಟ್ರಿಕ್ಟುಗಳೂ, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ್ನನುಸರಿಸಿ ಸೆಷನಿನ ಬಂದು ಡಿವೀಜನ್ನಾಗಿ ಭಾವಿಸಲ್ಪಡತಕ್ಕದ್ದು, ಮತ್ತು ಸದರೀ ಕೋಡಿನ 9ನೇ ಸೆಕ್ಷನ್ ಅನುಸರಿಸಿ ನಂದೀದುರ್ಗ ಡಿವೀಜ್ಯನ್ ಸೆಷನ್ಸ್ ಕೋರ್ಟ್ ಯಂಬ ಹೆಸರುಳ್ಳ ವಂದು ಸೆಷನ್ಸ್ ಕೋರ್ಟು ಸ್ಥಾಪಿಸಲ್ಪಡತಕ್ಕದ್ದು. 1890ನೇ ಇಸವಿ ಸೆಪ್ಟೆಂಬರ್ 15ನೇ ತಾರೀಖು ಮತ್ತು ಆ ತರುವಾಯದಲ್ಲಿ ಸಿವಿಲ್ ಸ್ವಭಾವವುಳ್ಳ ತಮಾಂ ಮೊಕದ್ದಮೆ ಮತ್ತು ನಡವಳಿಕೆಗಳಲ್ಲಿ ಬಂದು ಡಿಸ್ಟ್ರಿಕ್ಟು ಕೋರ್ಟಿನ ಸಾಧಾರಣ ಸಿವಿಲ್ ಓರಿಜನಲ್ ಅಧಿಕಾರಗಳೂ, ವಂದು ಸೆಷನ್ಸ್ ಕೋರ್ಟಿನ ಸಾಧಾರಣ ಕ್ರಿಮಿನಲ್ ಓರಿಜನಲ್ ಅಧಿಕಾರಗಳೂ ಸುದಾ ಸದರೀ ಡಿವೀಜನ್ನಿನ ಡಿಸ್ಟ್ರಿಕ್ಟು ವ ಸೆಷನ್ಸ್ ಜಡ್ಜ್‌ರವರಿಂದ ಮೇಲ್ಕಂಡ ನಂದೀದುರ್ಗ ಡಿವೀಜನ್ನಿನ ಸ್ಥಳ ಸರಹದ್ದುಗಳಲ್ಲಿ ಚಲಾಯಿಸಲ್ಪಡತಕ್ಕದ್ದು.

ನಂ. 227.—1890ನೇ ಇಸವಿಯ IIನೇ ನಂಬರ್ ರೆಗ್ಯುಲೇಷನ್ನಿಂದ ತಿದ್ದುಪಡಿಯಾದ ಮೈಸೂರು ಚೀಫ್ ಕೋರ್ಟ್ ರೆಗ್ಯುಲೇಷನಿನ 14ನೇ ಸೆಕ್ಷನ್ ಅನುಸರಿಸಿ ನೈಸೂರು ಸರ್ಕಾರದವರು, ನಂದೀದುರ್ಗ ಡಿವೀಜನ್ನಲ್ಲಿ ಅಡಗಿರತಕ್ಕ ಬೆಂಗಳೂರು ಕೋಲಾರ ವ ತುಮಕೂರು ಈ ಮೂರು ರೆವಿನ್ಯೂ ಡಿಸ್ಟ್ರಿಕ್ಟುಗಳ ಸ್ಥಳ ಸರಹದ್ದುಗಳಲ್ಲಿನ ಸಿವಿಲ್ ಯಾ ಕ್ರಿಮಿನಲ್ ತಾಬೇದಾರಿ ಕೋರ್ಟುಗಳಿಂದ ಕೊಡಲ್ಪಟ್ಟ ಜಡ್ಜ್‌ಮೆಂಟುಗಳು, ಆರಡರ್‌ಗಳು, ಡಿಕ್ರಿ ಯಾ ಸೆರ್ಟಿಫಿಕೇಟುಗಳು ಇವುಗಳ ಮೇಲೆ ಕಾನೂನ್ ರೀತ್ಯಾ ಬಂದು ಡಿಸ್ಟ್ರಿಕ್ಟು ಕೋರ್ಟು ಯಾ ಸೆಷನ್ಸ್ ಕೋರ್ಟಿಗೆ ಮಾಡಬಹುದಾದಂಥಾ ತಮಾಂ ಅಪ್ಪೀಲುಗಳನ್ನೂ ವಿಮರ್ಶೆ ಮಾಡಿ ಫೈಸಲ್ಮಾಡುವ ಬಗ್ಗೆ ಸದರೀ ಚೀಫ್ ಕೋರ್ಟಿಗೆ ಇದರ ದೆಕೇಯಿಂದ ಅಧಿಕಾರ ಉಂಟು ಮಾಡುತ್ತಾರೆ, ಮತ್ತು ಯಿನ್ನೊಂದು ಸುಕ್ತುಂ ಕೊಡುವ ಪರಿಯಂತ, ಸದರೀ ಚೀಫ್ ಕೋರ್ಟಿಗೆ ಇದರ ದೆಕೇಯಿಂದ ಉಟ್ಟು ಮಾಡಲ್ಪಟ್ಟ ಅಪ್ಪೀಲ್ ಅಧಿಕಾರವು, ನಂದೀದುರ್ಗ ಡಿವೀಜನ್ನಿನ ಡಿಸ್ಟ್ರಿಕ್ಟು ಯಾ ಸೆಷನ್ಸ್ ಕೋರ್ಟಿನಿಂದ ಅಂಥಾ ಡಿಸ್ಟ್ರಿಕ್ಟು ಯಾ ಸೆಷನ್ಸ್ ಕೋರ್ಟಿನಿಂದ ವಿಮರ್ಶೆ ಮಾಡಲ್ಪಟ್ಟು ಫೈಸಲ್ ಮಾಡುವ ಬಗ್ಯಾಗಿ ಸದರೀ ಚೀಫ್ ಕೋರ್ಟಿನಿಂದ ವರ್ಗ ಮಾಡಲ್ಪಡಬಹುದಾದ ಅಪ್ಪೀಲು ಮೊಕದ್ದಮೆಗಳಲ್ಲಿ ವಿನಾ ಅನ್ಯಥಾ ಚಲಾಯಿಸಲ್ಪಡತಕ್ಕದ್ದಲ್ಲವು.

ನಂ. 228.—ಮೈಸೂರಿನ ಡಿಸ್ಟ್ರಿಕ್ಟು ವ ಸೆಷನ್ಸ್ ಜಡ್ಜ್‌ರಾದ ಮೆಸ್ಟರ್ ಟಿ. ನರಹರಿರಾವ್, ಯಂ. ಯಲ್. ಯವರು, 1890ನೇ ಇಸವಿ ಸೆಪ್ಟಂಬರ್ 15ನೇ ಮುಕ್ತುಂ ಲಾಗಾಯತು ನಂದೀದುರ್ಗ ಡಿವೀಜನ್ನಿನ ಡಿಸ್ಟ್ರಿಕ್ಟು ವ ಸೆಷನ್ಸ್ ಜಡ್ಜ್‌ರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ಮೈಸೂರು ಸಬಾರ್ಡಿನೇಟ್ ಜಡ್ಜ್‌ರಾದ ಮೆಸ್ಟರ್ ಸಿ. ಶ್ರೀನಿವಾಸಯ್ಯಂಗಾರ್ರು, ಬೆಂಗಳೂರಿಗೆ ವರ್ಗಾಯಿಸಲ್ಪಟ್ಟ ಮೆಸ್ಟರ್ ಟಿ. ನರಹರಿರಾಯರಿಗೆ ಬದಲಾಗಿ ಮೈಸೂರಿನ ಡಿಸ್ಟ್ರಿಕ್ಟಿನ ಸೆಷನ್ಸ್ ಜಡ್ಜ್‌ರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ; ಮತ್ತು ಯಿವರು ಮೆಸ್ಟರ್ ನರಹರಿರಾಯರಿಂದ ಮಾಹೇಮಜಕೂರು 11ನೇ ಮುಕ್ತುಂನಲ್ಲಿ ಯಾ ಅದಕ್ಕೆ ಮುಂಚಿತವಾಗಿ ಚಾರ್ಜ್ ವಹಿಸತಕ್ಕದ್ದು.

ಮೈಸೂರು ಡಿಸ್ಟ್ರಿಕ್ಟು ಆಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಯಂ. ರಾಮಸ್ವಾಮಿ ಅಯ್ಯರ್ ಬಿ. ಯೆ. ಬಿ. ಯಲ್ ಯವರು, ಬಡ್ತಿ ಮಾಡಲ್ಪಟ್ಟ ಮೆಸ್ಟರ್ ಸಿ. ಶ್ರೀನಿವಾಸಯ್ಯಂಗಾರ್ರಿಗೆ ಬದಲಾಗಿ ಸಬ್ ಪ್ರೊಟೆಂ ತರೀಕ್ 3ನೇ ಗ್ರೇಡ್ ಸಬಾರ್ಡಿನೇಟ್ ಜಡ್ಜ್‌ರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ನಂ. 229.—1887ನೇ ಇಸವಿ ಜುಲೈ 6ನೇ ಮುಕ್ತುಂ ಕ್ಯಾಂಪ್ 1552ನೇ ನಂಬರ್, ಮತ್ತು 1888ನೇ ಇಸವಿ ಮಾರ್ಚಿ 6ನೇ ಮುಕ್ತುಂ ಕ್ಯಾಂಪ್ 2741ನೇ ನಂಬರ್ ಇಸ್ತಿಹಾರ್‌ನಾಮೆಗಳನ್ನ ರದ್ದು ಮಾಡಿ 1882ನೇ ಇಸವಿಯ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 269 ವ 274ನೇ ಸೆಕ್ಷನ್ ನಿಯಮಗಳನುಸರಿಸಿ, ಶ್ರೀಮದ್ ಮಹಾರಾಜರಾಜಾಸಾಹೆಬ್ ಬಹದ್ದೂರವರ ಸರ್ಕಾರದವರು ಆಜ್ಞಾಪಿಸುವದೇನಂದರೆ, ನಂದೀದುರ್ಗ ಡಿವೀಜನ್ನಿನ ಸೆಷನ್ಸ್ ಕೋರ್ಟಿನ ಮುಂದೆ ಇದರಡಿ ಕಂಡ ತಕ್ಕೀರುಗಳ ವಿಚಾರಣೆಯು, ಅಂಥಾ ವಿಚಾರಣೆಯು ಬೆಂಗಳೂರು ಮೊಕ್ಕಾಮಿನಲ್ಲಿ ನಡಿಸಲ್ಪಡುವಾಗ, ಐದು ಜನಗಳು ಕೇರಿದ ಜ್ಯೂರಿಗಳಿಂದ ನಡಿಸಲ್ಪಡತಕ್ಕದ್ದು:—

(1) ಇಂಡಿಯನ್ ಪೆನಲ್ ಕೋಡಿನ ಸೆಕ್ಷನ್ 379—380 ಮತ್ತು 381ರ ಪ್ರಕಾರ ಕಳವು.
(2) ಡಿಟೋ 384 ಮತ್ತು 389ರ ಪ್ರಕಾರ ಸುಲಿಗೆ.
(3) ಡಿಟೋ 392ರಿಂದ 395ರವರಿಗಿನ ಮತ್ತು 397ರಿಂದ 402ರವರಿಗಿನ ಪ್ರಕಾರ ಜೋರಿ ಯಾ ಗುಂಪಿನ ಜೋರಿ.
(4) ಸೆಕ್ಷನ್ 411, 412 ಮತ್ತು 414ರ ಅನುಸಾರವಾಗಿ ಜೋರಿ ಮಾಲನ್ನು ಈಸುಕೊಳ್ಳುವಣ.
(5) ಸೆಕ್ಷನ್ 451, 452, 454ರಿಂದ 459ರವರಿಗಿನ ಮತ್ತು 462ನೇ ಸೆಕ್ಷನ್ ಅನುಸಾರವಾಗಿ ಮನೆಗೆ ಅತಿಕ್ರಮ ಪ್ರವೇಶ ಮಾಡುವಣ ಮುಂತಾದ್ದು.

(6) ಸೆಕ್ಷನ್ 429ರಿಂದ 433ರವರಿಗಿನ ಮತ್ತು 435ರಿಂದ 440ರ ವರಿಗಿನ ಅನುಸಾರವಾದ ಕೆಡಕು.
(7) ಮೇಲ್ಕಂಡ ಯಾವದಾದರೂ ತಕ್ಕೀರುಗಳಿಗೆ ಮುದ್ದತ್ ಮಾಡುವಣ.
(8) ಸೆಕ್ಷನ್ 413ರ ಪ್ರಕಾರ ಜೋರಿಮಾಲಿನ ವ್ಯಾಪಾರ ನಡಿಸುವಣ.

2. ಯಿತರ ತಕ್ಕೀರುಗಳಿಗೆ ಸಂಬಂಧಪಟ್ಟ ವಿಚಾರಣೆಯು, ಅಸೆಸ್ಸರ ಸಹಾಯದಿಂದ ನಡಿಸಲ್ಪಡತಕ್ಕದ್ದು.

ನಂ. 230.—ಈ ತಾರೀಖಿನ 226ನೇ ನಂಬರ್ ಇಸ್ತಿಹಾರ್‌ನಾಮೆ ಕುರಿತು, ಶ್ರೀಮದ್ ಮಹಾರಾಜರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಆಜ್ಞಾಪಿಸಲ್ಪಡುವದೇನಂದರೆ, ನಂದೀದುರ್ಗ ಡಿವೀಜ್ಯ ಸೆಷನ್ಸ್ ಕೋರ್ಟಿನ ಮುಂದೆ ನಡಿಸಲ್ಪಡುವ ತಮಾಂ ವಿಚಾರಣೆಗಳೂ ಅಂಥಾ ವಿಚಾರಣೆಗಳು ಕೋಲಾರ ಯಾ ತುಮಕೂರು ಮೊಕ್ಕಾಂಗಳಲ್ಲಿ ನಡಿಸಲ್ಪಟ್ಟಾಗ, ಅಸೆಸ್ಸರ ಸಹಾಯದಿಂದ ನಡಿಸಲ್ಪಡತಕ್ಕದ್ದು.

ನಂ. 231.—ಮೆಸ್ಸರ್ ಎಸ್. ರಾಮಸ್ವಾಮಿ ಐಯ್ಯರವರಿಗೆ, 1890ನೇ ಇಸವಿ ಸೆಪ್ಟಂಬರ್ 15ನೇ ಮುಕ್ತಂ ಲಾಗಾಯಿತು ನಂದೀದುರ್ಗ ಡಿವೀಜನ್ನಿನ ಪಬ್ಲಿಕ್ ಪ್ರಾಸಿಕ್ಯೂಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತೆ, ಮತ್ತು ಅವರು, 1882ನೇ ಇಸವಿಯ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 422ನೇ ಸೆಕ್ಷನ್ ಅನುಸರಿಸಿ ಸಂಸ್ಥಾನ ಮುಳಿ ಯಾವ ಸೆಷನ್ ಕೋರ್ಟಿನಿಂದಲಾಗಲೀ ವಿಧಿಸಲ್ಪಟ್ಟ ಸಜಾಗಳ ಮೇಲಿನ ಅಪ್ಪೀಲುಗಳ ತವಾಂ ನೋಟೀಸುಗಳನ್ನೂ, ಸದರೀ ಕೋಡಿನ 526ನೇ ಸೆಕ್ಷನ್ ಅನುಸರಿಸಿ ಪಬ್ಲಿಕ್ ಪ್ರಾಸಿಕ್ಯೂಟರಿಗೆ ಕೊಡಲ್ಪಡಬೇಕಾದ ನೋಟೀಸುಗಳನ್ನೂ ಸುದಾ ತೆಗದುಕೊಳ್ಳುವದಕ್ಕೆ ಇದರಿಂದ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ನಂ. 232.—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ, ಬೆಂಗಳೂರು ಸಬ್ಡಿವಿಜನ್ ಜಜ್ಜರಾದ ಮೆಸ್ಸರ್ ಯಲ್. ಅನಂತಸಾಮಿರಾಯರಿಗೆ, ಸದರೀ ಕೋಡಿನ IIIನೇ ಷಡ್ಯೂಲ್‌ನಲ್ಲಿ ವಿವರಿಸಲ್ಪಟ್ಟಂತೆ ಒಬ್ಬ ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟರ ಸಾಧಾರಣ ಅಧಿಕಾರಗಳು ಕೊಡಲ್ಪಟ್ಟಿರುತ್ತೆ.

ನಂ. 233.—ಮೈಸೂರು ಡಿಸ್ಟ್ರಿಕ್ಟು ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರ ವ ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟರಾದ ಮೆಸ್ಸರ್ ಕೆ. ಮಹಮ್ಮದಲ್ಲೀ ಯವರಿಗೆ, ಅದೇ ಡಿಸ್ಟ್ರಿಕ್ಟಿನಲ್ಲಿ ಚಾಲ್ತೀ ಕೆಲಸವ ಬಗ್ಗೆ ವರ್ಗಾಯಿಸಲ್ಪಟ್ಟಿರುತ್ತೆ.

ಕಡೂರು ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಕಮ್ಮಿಷನರ ಮೆಸ್ಟರ್ ಪಿ. ಆರ್. ಡಬ್ಳಿಯು, ವೆದರಾಲ್ ಯವರಿಗೆ, ಮೈಸೂರು ಡಿಸ್ಟ್ರಿಕ್ಟಿಗೆ ಪೊಲೀಸ್ ಕೆಲಸಕ್ಕೋಸ್ಕರ ವರ್ಗಾಯಿಸಲ್ಪಟ್ಟಿರುತ್ತೆ.

ಮೆಸ್ಸರ್ ಜಾರ್ಜ ಡನಿಂಗ್ ಯವರಿಗೆ, ಅಜವಾಯಿಷಿ ತರೀಕ್ ಕಡೂರು ಡಿಸ್ಟ್ರಿಕ್ಟು ಪೊಲೀಸ್ ಆಸಿಸ್ಟೆಂಟ್ ಕಮ್ಮಿಷನರ ಕೆಲಸಕ್ಕೆ ಆಕ್ಟಿಂಗ್ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತೆ.

ಹುಕ್ಕುಂ ಬಮೋಜೀಬ್,
ಟಿ. ಆನಂದರಾವ್,
ಚೀಫ್ ಸೆಕ್ರಿಟರಿ.

---

## ಲೆಜಿಸ್ಲೇಟಿವ್ ಇಲಾಖಾ.

## ಸ್ಟ್ಯಾಂಪ್‌ಗಳು.

## ಇಸ್ತಿಹಾರ್‌ನಾಮೆ.

ತಾರೀಖು 13ನೇ ಜೂ ಈ 1890.

ನಂ. 1.—ಸ್ ಈ 1879ನೇ ಇಸವಿಯ Iನೇ ನಂಬರ್ ಇಂಡಿಯನ್ ಸ್ಟ್ಯಾಂಪ್‌ಕಾಕ್ಟಿನ 8ನೇ ಸೆಕ್ಷನ್ ಪ್ರಕಾರ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—

ಮೈಸೂರ್ ಶೀಮೆಯೊಳಗೆಲ್ಲಾ ಆಗಲಿ ಅಥವಾ ಮೈಸೂರ್ ಶೀಮೆಯ ಯಾವ ಭಾಗದಲ್ಲಾಗಲಿ ಹಾಸಲಿಗೆ ಗುರಿಯಾಗುವ (*a*) ಯಾವದಾದರು ದಸ್ತಾವೇಜುಗಳ, ಅಥವಾ, (*b*) ದಸ್ತಾವೇಜುಗಳ ಪೈಕಿ ಯಾವದಾದರೊಂದು ರಖಮಿನ ದಸ್ತಾವೇಜುಗಳ, ಅಥವಾ (*c*) ಅಂತಾ ರಖಮಿಗೆ ಸೇರಿದ ದಸ್ತಾವೇಜುಗಳ ಪೈಕಿ ಯಾವದಾದರು ದಸ್ತಾವೇಜುಗಳ ಅಥವಾ (*d*) ಜನರ ಯಾವದಾದರೊಂದು ಕೋಮಿನಿಂದಾಗಲಿ, ಅಥವಾ ಆ ಕೋಮಿನ ಹೆಸರಿಗಾಗಲಿ ಅಥವಾ ಅಂತಾ ಕೋಮಿನ ಯಾವ ಮೆಂಬರಿಂದಾಗಲಿ ಅಥವಾ ಅವನ ಹೆಸರಿಗಾಗಲಿ ಬರೆದು ಕೊಡಲ್ಪಟ್ಟಿಂತಾ ಯಾವದಾದರು ದಸ್ತಾವೇಜುಗಳ ಹಾಸಲನ್ನು ಈ ಇಸ್ತಿಹಾರಿಗೆ ಪೂರ್ವದಲ್ಲಾಗಲಿ, ಅಥವಾ ಇತೀ ಪರವಾಗಲಿ ಕಮ್ಮಿ ಮಾಡಬ ಹುದಾದ ಯಾ ಮಾಫ್ ಮಾಡಬಹುದಾದ ಅಧಿಕಾರವನ್ನನುಸರಿಸಿ ಶ್ರೀಮರ್ ಮಹಾರಾಜಾ ಸರ್ಕಾರದವರು.—

(1) ಈ ಇಸ್ತಿಹಾರ್ ನಾಮೆಯ ಮೊದಲನೇ ಷೆಡ್ಯೂಲಿನ ಮೊದಲನೆಯ ಕಾಲಂನಲ್ಲಿ ನಮೂದಾಗಿರುವ ದಸ್ತಾವೇಜುಗಳ ಮೇಲಣ ಹಾಸಲ್‌ಗಳನ್ನು ಸದರೀ ಷೆಡ್ಯೂಲಿನ ಯೆರಡನೇಯ ಕಾಲಂನಲ್ಲಿ ತೋರಿಸಲ್ಪಟ್ಟಿರುವ ಮೊಬಲಗುಗಳಿಗೆ ಕ್ರಮವಾಗಿ ತಗ್ಗಿಸತಕ್ಕದ್ದೆಂತಲೂ, ಮತ್ತು

(2) ಈ ಇಸ್ತಿಹಾರ್‌ನಾಮೆಯ ಯೆರಡನೆಯ ಷೆಡ್ಯೂಲಿನಲ್ಲಿ ನಮೂದಾಗಿರುವ ದಸ್ತಾವೇಜುಗಳ ಮೇಲಣ ಹಾಸಲ್‌ಗಳನ್ನು ಮಾಫ್ ಮಾಡತಕ್ಕದ್ದೆಂತಲೂ ಅಜ್ಞಾಪಿಸಿರುತ್ತಾರೆ.

(2.) ಸ್ ಈ 1879ನೇ ಇಸವಿಯ Iನೇ ನಂಬರ್ ಇಂಡಿಯನ್ ಸ್ಟ್ಯಾಂಪ್‌ಕಾಕ್ಟಿನ 8ನೇ ಸೆಕ್ಷನ್ ಅನುಸರಿಸಿ ಕೊಡಲ್ಪಟ್ಟ ತವಾಂ ಹಿಂದಿನ ಇಸ್ತಿಹಾರ್‌ನಾಮೆಗಳು ಇದರಿಂದ ರದ್ದುಮಾಡಲ್ಪಟ್ಟಿರುತಿವೆ, ಪರಂತು ಅವುಗಳ ಹಿಂದಿನ ಚಲಾವಣೆಗೆ ಬಾಧಕ ವುಂಟಾಗಲಾರದು:—